# ಉಪ ತಹಶೀಲ್ದಾರರ ನ್ಯಾಯಾಲಯ, ತಂಬ್ರಹಳ್ಳಿ-583224

**OFFICE OF THE DEPUTY TAHASILDAR, THAMBRAHALLI-583224**

ಎ.ವಿಲೇ.ನಂ.ಕಂ.ಪಹಣಿ.ವಿವಾದ/28/2015-16 ದಿನಾಂಕ: 05.05.2016

ಉಪತಶೀಲ್ದಾರರು: ಶ್ರೀ ನಾಗರಾಜ. ಹೆಚ್.
ಉಪತಹಶೀಲ್ದಾರರು
ನಾಡ ಕಛೇರಿ ತಂಬ್ರಹಳ್ಳಿ

| ವಾದಿ (ಶ್ರೀ/ಶ್ರೀಮತಿ) | ಪ್ರತಿವಾದಿ(ಶ್ರೀ/ಶ್ರೀಮತಿ) |
|---|---|
| 1] ಬಾಳನಗೌಡ 2] ಬಸವನಗೌಡ 3] ಬಸವಲಿಂಗನಗೌಡ ಎಲ್ಲರ ತಂದೆ ಲೇಟ್ ಸಣ್ಣ ಬಸವನಗೌಡ 4] ಕರಿಬಸಮ್ಮ ಗಂಡ ಲೇಟ್ ಕೆಂಚನಗೌಡ 5] ಪಕ್ಕೀರಮ್ಮ ಗಂಡ ಲೇಟ್ ಎಂ.ಕೆ ಪತ್ರಿಗೌಡ ವಾಸ ಅಂಕಸಮುದ್ರ ಗ್ರಾಮ ಹಬೊ ಹಳ್ಳಿ ತಾಲೂಕು | ಕಂದಾಯ ನಿರೀಕ್ಷಕರು ತಂಬ್ರಹಳ್ಳಿ |

**ವ್ಯಾಜ್ಯದ ಜಮೀನಿನ ವಿವರ**

| ಗ್ರಾಮ | ಸ.ನಂ. | ವಿಸ್ತೀರ್ಣ |
|---|---|---|
| ಅಂಕಸಮುದ್ರ | 55/ಜಿ | 3.76 ಎಕರೆ |

*****

**ಪೀಠಿಕೆ:**

ಹಗರಿ ಬೊಮ್ಮನಹಳ್ಳಿ ತಾಲೂಕು ತಂಬ್ರಹಳ್ಳಿ ಹೋಬಳಿ ಅಂಕಸಮುದ್ರ ಗ್ರಾಮದ ಸ.ನಂ.55/ಜಿ ವಿಸ್ತೀರ್ಣ 3.76 ಎಕರೆ ವಿವಾದಾಸ್ಪದ ಜಮೀನಿಗೆ ಸಂಬಂಧಿಸಿದಂತೆ ಪೋತಿ ವಾರಸ ಮೇರೆಗೆ ಹಕ್ಕು ಬದಲಾವಣೆ ಆದೇಶ ಸಂಖ್ಯೆ:ಹೆಚ್ 12/2015-16, ರಲ್ಲಿ ಮನವಿದಾರರು ಸಂಬಂಧಪಟ್ಟ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸದೇ ಇರುವುದರಿಂದ ಈ ಪ್ರಕರಣವು ವಿವಾದಸ್ಪದವೆಂದು ಪರಿಗಣಿಸಿ ಕಂದಾಯ ನಿರೀಕ್ಷಕರು ತಂಬ್ರಹಳ್ಳಿ ಇವರು ಪ್ರಸ್ತುತ ಕಡತವನ್ನು ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಕಡತವನ್ನು ಪರಿಶೀಲಿಸಲಾಗಿ, ನೈಸರ್ಗಿಕ ನ್ಯಾಯದ ಹಿತದೃಷ್ಟಿಯಿಂದ ಪ್ರಕರಣದ ವಿಚಾರಣೆಯನ್ನು ದಿನಾಂಕ:26.11.2015 ರಂದು ನಿಗಧಿಗೊಳಿಸಿ ಉಭಯ ಪಕ್ಷಗಳಿಗೆ ನೋಟೀಸ್ ಮೂಲಕ ತಿಳಿಸಿ ವಿಚಾರಣೆಯನ್ನು ನಡೆಸಲಾಯಿತು.

ವಾದಿಗಳ ಪ್ರಕಾರ ವ್ಯಾಜ್ಯದ ಜಮೀನಿನ ಪೈಕಿ ವಿಸ್ತೀರ್ಣ 1.88 ಎಕರೆ ಜಮೀನು ಎಂ.ಕೆ. ಸಣ್ಣಬಸವನಗೌಡ ಹಾಗೂ ವಿಸ್ತೀರ್ಣ 1.88 ಎಕರೆ ಜಮೀನು ಎಂ.ಕೆ. ಪತ್ರಿಗೌಡ ಇವರ ಹೆಸರಿನಲ್ಲಿ ಖಾತೆ ಇದ್ದು, ಈ ಪೈಕಿ ಎಂ.ಕೆ.ಸಣ್ಣಬಸವನಗೌಡ ಇವರು ದಿನಾಂಕ:15.04.1989 ರಂದು ಹಾಗೂ ಅವರ ಪತ್ನಿಯಾದ ಬಸಮ್ಮ ಇವರು ದಿನಾಂಕ:04.01.1968 ರಲ್ಲಿ ಮರಣ ಹೊಂದಿರುವುದರಿಂದ ವ್ಯಾಜ್ಯದ ಜಮೀನಿನ ಪೈಕಿ ವಿಸ್ತೀರ್ಣ 1.88 ಎಕರೆ ಜಮೀನನ್ನು ಪೋತಿ ವಾರಸ ಪ್ರಕಾರ ಮಕ್ಕಳಾದ1] ಬಾಳನಗೌಡ 2] ಬಸವಲಿಂಗನಗೌಡ 3] ಬಸವನಗೌಡ 4] ಕೆಂಚನಗೌಡ ಇವರು ದಿನಾಂಕ:08.08.2008 ರಂದು ಮರಣ ಹೊಂದಿರುವುದರಿಂದ ಅವರ ಪತ್ನಿಯಾದ ಶ್ರೀಮತಿ ಕರಿಬಸಮ್ಮ ಇವರ ಹೆಸರಿಗೆ ಜಂಟಿಯಾಗಿ ಖಾತೆ ಮಾಡುವಂತೆ ಹಾಗೂ ವ್ಯಾಜ್ಯದ ಜಮೀನಿನ ಪೈಕಿ ಉಳಿದ ವಿಸ್ತೀರ್ಣ 1.88 ಎಕರೆ

06/05/16

- ಜಮೀನಿನ ಇನ್ನೊಬ್ಬ ಪಟ್ಟಾದಾರರಾದ ಎಂ.ಕೆ. ಪತ್ರಿಗೌಡ ಇವರು ದಿನಾಂಕ:25.01.1994 ರಂದು ಮರಣ ಹೊಂದಿರುವುದರಿಂದ ಸದರಿಯವರ ಪತ್ನಿ ಶ್ರೀಮತಿ ಪಕ್ಕೀರಮ್ಮ ಇವರ ಹೆಸರಿಗೆ ಪೋತಿ ವಾರಸತ್ವದ ಪ್ರಕಾರ ಖಾತೆ ಮಾಡಿಕೊಡುವಂತೆ ಕೋರಿ ಮನವಿಯನ್ನು ಸಲ್ಲಿಸಿರುತ್ತಾರೆ.

ಪ್ರಸ್ತುತ ಹಕ್ಕುಬದಲಾವಣೆಗೆ ಮನವಿದಾರರು ತಮ್ಮ ಮನವಿಯೊಂದಿಗೆ ಮರಣ ಪ್ರಮಾಣಪತ್ರವನ್ನು ಹಾಜರುಪಡಿಸುವ ಬದಲಾಗಿ ತಹಶೀಲ್ದಾರರು ಹಬೊ ಹಳ್ಳಿ ಇವರಿಂದ ಪಡೆದ ಅಲಭ್ಯ ಪ್ರಮಾಣ ಪತ್ರವನ್ನು ಹಾಗೂ ಹಿಂಬರಹ ಪತ್ರವನ್ನು ಹಾಜರುಪಡಿಸಿರುವುದರಿಂದ ಕಂದಾಯ ನಿರೀಕ್ಷಕರು ತಂಬ್ರಹಳ್ಳಿ ಇವರು ಪ್ರಸ್ತುತ ಪ್ರಕರಣವನ್ನು ವಿವಾದಾಸ್ಪದವೆಂದು ಪರಿಗಣಿಸಿ ಈ ಕಛೇರಿಗೆ ಮುಂದಿನ ಕ್ರಮಕ್ಕಾಗಿ ಸಲ್ಲಿಸಿರುತ್ತಾರೆ ವಿಚಾರಣಾ ವೇಳೆಯಲ್ಲಿ ವಾದಿಗಳು ಹಾಜರಾಗಿ ಸಂಬಂಧಿಸಿದ ಎಲ್ಲಾ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸುತ್ತಾ ಪ್ರಸ್ತುತ ಹಕ್ಕುಬದಲಾವಣೆಯನ್ನು ಅಂಗೀಕರಿಸುವಂತೆ ಕೋರಿರುತ್ತಾರೆ.

ಪ್ರಸ್ತುತ ಕಡತದಲ್ಲಿನ ದಾಖಲೆಗಳನ್ನು ಪರಿಶೀಲಿಸಲಾಗಿ ಈ ಕೆಳಕಂಡ ಅಂಶಗಳು ಕಂಡುಬಂದಿರುತ್ತವೆ.

1. ವ್ಯಾಜ್ಯದ ಜಮೀನಿನ ಪಹಣಿ ಪತ್ರಿಕೆಯನ್ನು ಪರಿಶೀಲಿಸಲಾಗಿ ಎಂ.ಕೆ. ಸಣ್ಣ ಬಸವನಗೌಡ ಹಾಗೂ ಎಂ.ಕೆ. ಪತ್ರಿಗೌಡ ಇವರಿಗೆ ತಲಾ 1.88 ಎಕರೆ ಜಮೀನು ಪ್ರತ್ಯೇಕವಾಗಿ ಖಾತೆ ಇರುವುದು ಕಂಡುಬಂದಿರುತ್ತದೆ.
2. ಎಂ.ಕೆ. ಸಣ್ಣ ಬಸವನಗೌಡ ಇವರು ದಿನಾಂಕ:15.04.1989 ರಂದು ಹಾಗೂ ಇವರ ಪತ್ನಿಯಾದ ಶ್ರೀಮತಿ ಬಸಮ್ಮ ಇವರು ದಿನಾಂಕ:04.01.1968 ರಂದು ಮರಣ ಹೊಂದಿರುತ್ತಾರೆ ಇವರ ಮಕ್ಕಳಾದ 1] ಬಾಳನಗೌಡ 2] ಬಸವಲಿಂಗನಗೌಡ 3] ಬಸವನಗೌಡ 4] ಕೆಂಚನಗೌಡ ಇವರು ದಿನಾಂಕ:08.08.2008 ರಂದು ಮರಣ ಹೊಂದಿರುವುದರಿಂದ ಅವರ ಪತ್ನಿಯಾದ ಶ್ರೀಮತಿ ಕರಿಬಸಮ್ಮ 5] ಲಕ್ಷ್ಮಮ್ಮ (ವಿವಾಹಿತೆ) 6] ಬಾಳಮ್ಮ (ಪೋತಿ) 7] ಗುಬ್ಬಮ್ಮ (ವಿವಾಹಿತೆ) 8] ನಿಂಗಮ್ಮ (ಪೋತಿ) 9] ಬಸಮ್ಮ (ವಿವಾಹಿತೆ) ಇವರು ವ್ಯಾಜ್ಯದ ಜಮೀನಿನ ಪೈಕಿ ಪಟ್ಟಾದಾರರಾದ ಎಂ.ಕೆ. ಸಣ್ಣ ಬಸವನಗೌಡ ಇವರ ನೇರ ವಾರಸುದಾರರಾಗಿರುವುದು ಮರಣ ಪ್ರಮಾಣ ಪತ್ರ ಹಾಗೂ ವಂಶ ವೃಕ್ಷ ಪ್ರಮಾಣ ಪತ್ರಗಳಿಂದ ಕಂಡುಬಂದಿರುತ್ತದೆ.
3. ಎಂ.ಕೆ. ಪತ್ರಿಗೌಡ ಇವರು ದಿನಾಂಕ:25.01.1994 ರಂದು ಮರಣ ಹೊಂದಿರುವುದರಿಂದ ಅವರ ಪತ್ನಿಯಾದ ಶ್ರೀಮತಿ ಪಕ್ಕೀರಮ್ಮ ಇವರು ನೇರ ವಾರಸುದಾರರಾಗಿರುವುದು ಮರಣ ಪ್ರಮಾಣ ಪತ್ರ ಹಾಗೂ ವಂಶ ವೃಕ್ಷ ಪ್ರಮಾಣ ಪತ್ರಗಳಿಂದ ಕಂಡುಬಂದಿರುತ್ತದೆ.
4. ಎಂ.ಕೆ. ಸಣ್ಣ ಬಸವನಗೌಡ ಇವರ ಮಕ್ಕಳಾದ ಬಾಳಮ್ಮ ಮತ್ತು ನಿಂಗಮ್ಮ ಇವರು ಕ್ರಮವಾಗಿ ದಿನಾಂಕ:09.05.2010 ಮತ್ತು 01.01.1996 ರಂದು ಮರಣ ಹೊಂದಿರುವುದಾಗಿ ಮರಣ ಪ್ರಮಾಣ ಪತ್ರದಿಂದ ಕಂಡುಬಂದಿರುತ್ತದೆ ಉಳಿದ ಹೆಣ್ಣು ಮಕ್ಕಳಾದ ಲಕ್ಷ್ಮಮ್ಮ, ಗುಬ್ಬಮ್ಮ ಬಸಮ್ಮ ಇವರುಗಳು ವಿವಾಹಿತರಾಗಿದ್ದು ಸದರಿಯವರು ಪ್ರಸ್ತುತ ಹಕ್ಕುಬದಲಾವಣೆಗೆ ತಮ್ಮದೇನು ಆಕ್ಷೇಪಣೆ ಇಲ್ಲವೆಂದು ತಿಳಿಸಿರುತ್ತಾರೆ.

ಮೇಲ್ಕಂಡ ಎಲ್ಲಾ ಅಂಶಗಳನ್ನು ಪರಿಗಣನೆಗೆ ತೆಗೆದುಕೊಂಡು ವ್ಯಾಜ್ಯದ ಜಮೀನಿನ ಪಟ್ಟಾದಾರರು ಮರಣ ಹೊಂದಿದ್ದು ಅವರುಗಳ ನೇರವಾರಸುದಾರರಾದ 1] ಬಾಳನಗೌಡ 2] ಬಸವಲಿಂಗನಗೌಡ 3] ಬಸವನಗೌಡ 4] ಶ್ರೀಮತಿ ಕರಿಬಸಮ್ಮ ಗಂಡ ಲೇಟ್ ಕೆಂಚನಗೌಡ ಇವರ ಹೆಸರಿಗೆ ಜಂಟಿಯಾಗಿ ವ್ಯಾಜ್ಯದ ಜಮೀನಿನ ಪೈಕಿ ವಿಸ್ತೀರ್ಣ 1.88 ಎಕರೆ ಜಮೀನನ್ನು ಮತ್ತು ಉಳಿದ

ವಿಸ್ತೀರ್ಣ 1.88 ಎಕರೆ ಜಮೀನನ್ನು ಪಕ್ಕೀರಮ್ಮ ಗಂಡ ಲೇಟ್ ಎಂ.ಕೆ. ಪತ್ರಿಗೌಡ ಇವರ ಹೆಸರಿಗೆ ಪೋತಿ ವಾರಸತ್ವದ ಪ್ರಕಾರ ಖಾತೆ ಮಾಡುವುದು ಸೂಕ್ತವೆಂದು ಕಂಡುಬಂದಿರುವುದರಿಂದ ಈ ಕೆಳಕಂಡಂತೆ

**-: ಆದೇಶ :-**

ಪೀಠಿಕೆಯಲ್ಲಿ ವಿವರಿಸಿದ ಸಂದರ್ಭ, ವಾಸ್ತವಾಂಶ, ಹಿನ್ನೆಲೆ ಮತ್ತು ಕಾರಣಗಳ ಆಧಾರದ ಮೇರೆಗೆ ಹಗರಿಬೊಮ್ಮನಹಳ್ಳಿ ತಾಲೂಕು ತಂಬ್ರಹಳ್ಳಿ ಹೋಬಳಿ ಅಂಕಸಮುದ್ರ ಗ್ರಾಮದ ಸ.ನಂ.55/ಜಿ ವಿಸ್ತೀರ್ಣ 3.76 ಎಕರೆ ಜಮೀನಿನ ಪೈಕಿ ವಿಸ್ತೀರ್ಣ 1.88 ಎಕರೆ ಜಮೀನನ್ನು 1] ಬಾಳನಗೌಡ ತಂದೆ ಲೇಟ್ ಸಣ್ಣ ಬಸವನಗೌಡ 2] ಬಸವಲಿಂಗನಗೌಡ ತಂದೆ ಲೇಟ್ ಸಣ್ಣ ಬಸವನಗೌಡ 3] ಬಸವನಗೌಡ ತಂದೆ ಲೇಟ್ ಸಣ್ಣ ಬಸವನಗೌಡ 4] ಶ್ರೀಮತಿ ಕರಿಬಸಮ್ಮ ಗಂಡ ಲೇಟ್ ಕೆಂಚನಗೌಡ ಇವರ ಹೆಸರಿಗೆ ಪೋತಿ ವಾರಸತ್ವದ ಪ್ರಕಾರ ಜಂಟಿಯಾಗಿ ಖಾತೆ ಮಾಡಲು ಹಾಗೂ ವ್ಯಾಜ್ಯದ ಜಮೀನಿನಲ್ಲಿ ಉಳಿದ ವಿಸ್ತೀರ್ಣ 1.88 ಎಕರೆ ಜಮೀನನ್ನು ಪಕ್ಕೀರಮ್ಮ ಗಂಡ ಲೇಟ್ ಎಂ.ಕೆ. ಪತ್ರಿಗೌಡ ಇವರ ಹೆಸರಿಗೆ ಪೋತಿ ವಾರಸತ್ವದ ಪ್ರಕಾರ ಖಾತೆ ಮಾಡಲು ಆದೇಶಿಸಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀಕರಣ ಮಾಡಿಸಿ, ತಪ್ಪುಗಳನ್ನು ಸರಿಪಡಿಸಿ ಈ ದಿನ ದಿನಾಂಕ: 05.05.2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ.

[ನಾಗರಾಜ.ಹೆಚ್]
ಉಪ ತಹಶೀಲ್ದಾರರು,
ನಾಡ ಕಛೇರಿ ತಂಬ್ರಹಳ್ಳಿ.

1. ವಾದಿ ಮತ್ತು ಪ್ರತಿವಾದಿಗಳಿಗೆ.
2. ಭೂಮಿ ಶಿರಸ್ತೆದಾರರು, ತಾಲೂಕು ಕಛೇರಿ ಹಗರಿ ಬೊಮ್ಮನಹಳ್ಳಿ ಇವರಿಗೆ ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.